ನನ್ನ ಮಗಳು ಲೌಕಿಕದ ಎಲ್ಲವನ್ನೂ ತೊರೆದು, ಲೋಕಹಿತದ ಧಮ್ಮವನ್ನು ಆಶ್ರಯಿಸಿದ್ದೇವೆ. ಗುರುಗಳಾದ ಅರವಣ ಅಡಿಗಳು ನಮಗೆ "ಲೌಕಿಕವನ್ನು ಸ್ವೀಕರಿಸಿದಷ್ಟೂ ದುಃಖ ಹೆಚ್ಚಾಗುತ್ತದೆ. ಭೋಗಾಸಕ್ತಿಯಿಂದ ಅಸೂಯೆ, ಸ್ವಾರ್ಥ ಹೆಚ್ಚಾಗುತ್ತದೆ. ಈ ಸರಣಿ ಹೀಗೆಯೇ ಮುಂದುವರೆಯುತ್ತದೆ. ಆದ್ದರಿಂದ ತ್ಯಾಗ ಮತ್ತು ನಿಸ್ವಾರ್ಥವೇ ಪರಮಸುಖದ ಜೀವನ" ಎಂಬುದನ್ನು ತಿಳಿಯ ಹೇಳಿದ್ದಾರೆ. ನಾವು ಅದರಂತೆಯೇ ನಡೆಯುತ್ತಿದ್ದೇವೆ. ಇದನ್ನು ನನ್ನ ತಾಯಿ ಚಿತ್ರಾವತಿಗೆ ತಿಳಿಸು. ನೀನಿನ್ನು ಹೋಗಬಹುದು' ಎಂದು ತಲೆಯೆತ್ತದೆ ಹೂ ಕಟ್ಟುತ್ತಾ ಮಾಧವಿ ಹೇಳಿದಳು. ಅವಳ ಮಾತುಗಳಲ್ಲಿ ಯಾವ ಆವೇಶವೂ ಇರಲಿಲ್ಲ! ಆದರೂ ಅದರಲ್ಲಿ ಕಠಿಣ ನಿರ್ಧಾರ ಇತ್ತು. ತನ್ನನ್ನು ಎಲ್ಲದರಿಂದಲೂ, ಎಲ್ಲರಿಂದಲೂ ಸ್ವತಂತ್ರಗೊಳಿಸಿಕೊಂಡಿದ್ದರಿಂದ ಮಾಧವಿಯ ಮಾತುಗಳು ಸಹಜವಾಗಿಯೇ ಹೊರಬಂದವು. ಮಣಿಮೇಕಲೆ ಮಾತ್ರ ಯಾರ ಮಾತುಗಳನ್ನೂ ಕೇಳಿಸಿಕೊಳ್ಳದೆ ಹೂ ಕಟ್ಟುವುದನ್ನು ಮುಂದುವರೆಸಿದ್ದಳು.

ಮಾಧವಿ ಹೇಳಿದ ಮಾತುಗಳನ್ನು ಕೇಳಿ ಚಿತ್ರಮಾಲೆಗೆ ನಿರಾಸೆಯಾಯಿತು. ಅವಳು ಕಣ್ಣೀರಾದಳು. ಅಲ್ಲಿ ನಿಲ್ಲಲಾರದೆ ನೇರವಾಗಿ ಚಿತ್ರಾವತಿಯ ಮನೆಗೆ ಹೊರಟಳು. ಕೋವಲನ ಮಾತು ಬಂದಾಗ, ತಂದೆಯನ್ನು ನೆನೆದು ಮಣಿಮೇಕಲೆಯ ದುಃಖ ಒತ್ತರಿಸಿತು. ಅರಿವಿಲ್ಲದಂತೆಯೇ ಒಂದು ದೊಡ್ಡ ಕಣ್ಣೀರಿನ ಹನಿ ಅವಳ ರೆಪ್ಪೆಯ ಮೇಲೆ ಬಂದು ನಿಂತಿತು. ಅದನ್ನು ಹೇಗೋ ಅವಳು ತಡೆದುಕೊಂಡಳು. ಆದರೆ ಎರಡನೆ ಹನಿಯ ಭಾರಕ್ಕೆ ರೆಪ್ಪೆ ತಡೆಯಲಾರದೆ ಆ ಹನಿಯನ್ನು ಕಟ್ಟಿದ ಹೂ ಮಾಲೆಯ ಮೇಲೆ ತೊಟ್ಟಿಕ್ಕಿಸಿತು.

ಮಣಿಮೇಕಲೆಯ ಕಣ್ಣಿನಿಂದ ಹೂ ಮಾಲೆಯ ಮೇಲೆ ಕಣ್ಣೀರು ತೊಟ್ಟಿಕ್ಕಿದ್ದನ್ನು ನೋಡಿದ ಮಾಧವಿ, ತನ್ನ ಕಣ್ಣಿನಲ್ಲೂ ಮಡುಗಟ್ಟಿದ್ದ ಕಣ್ಣೀರ ಹನಿಯನ್ನು ಹಾಗೆಯೇ ಹಿಂಗಿಸಿಕೊಂಡು 'ಮಗಳೇ, ದೇಹವೆನ್ನುವುದೇ ಅನಿತ್ಯ. ಧಮ್ಮ ಮಾತ್ರ ಶಾಶ್ವತ. ನಿನ್ನ ತಂದೆ ಕೋವಲ, ನಿನ್ನ ತಾಯಿ ಕನ್ನಗಿ, ನಾಳೆ ನಾನು, ಆನಂತರ ನೀನು.... ಹೀಗೆಯೇ ಮುಂದುವರಿಯುತ್ತದೆ. ಇದಕ್ಕಾಗಿ ದುಃಖಿಸಬೇಡ. ಕಣ್ಣೀರಿನಿಂದ ತೋಯ್ದ ಹೂಮಾಲೆಯನ್ನು ಸಂಜೆಯ ಪೂಜೆಗೆ ಬಳಸಬಾರದು. ನಗರಕ್ಕೆ ಹೋಗಿ ಯಾವುದಾದರೂ ಉದ್ಯಾನವನದಿಂದ ಬೇರೆ ಹೂಗಳನ್ನು ಕೊಯ್ದು ತಾ. ಅದನ್ನೇ ಮಾಲೆ ಮಾಡಿ ಸಂಜೆಯ ಪೂಜೆಗೆ ಬಳಸು' ಎಂದು ಮಣಿಮೇಕಲೆಗೆ ಹೇಳಿದಳು.

'ಹಾಗೆಯೇ ಆಗಲಿ' ಎಂದು ಮಣಿಮೇಕಲೆ ಮೇಲೆದ್ದಳು. ಅಲ್ಲಿಯೇ ವಿಹಾರದಲ್ಲಿ ಗಿಡಗಳಿಗೆ ನೀರುಣಿಸುತ್ತಿದ್ದ ಸುಧಾಮತಿ ಎಂಬ ಸನ್ಯಾಸಿನಿ ಮಾಧವಿಯ ಮಾತುಗಳನ್ನು ಕೇಳಿಸಿಕೊಂಡು 'ಅಕ್ಕಾ ಮಾಧವಿ, ನಾಳೆಯ ಇಂದ್ರೋತ್ಸವಕ್ಕಾಗಿ ಇಡೀ ಪಟ್ಟಣ ಜನರಿಂದ ಗಿಜುಗುಡುತ್ತಿದೆ. ಅಲ್ಲಿ ಎಂತೆಂತಹ ಜನರಿರುತ್ತಾರೋ! ಇಂತಹ ಹೊತ್ತಿನಲ್ಲಿ ಮಣಿಮೇಕಲೆ ಒಬ್ಬಳನ್ನೇ ಹೂ ತರಲು ಉದ್ಯಾನವನಕ್ಕೆ ಕಳುಹಿಸುವುದು ಅಷ್ಟು ಉಚಿತವಲ್ಲ! ಅವಳೊಂದಿಗೆ ನಾನೂ ಹೋಗಿಬರುತ್ತೇನೆ' ಎಂದಳು.

ಹೊರಡುವ ಮುನ್ನ ಸುಧಾಮತಿಯು, 'ತಂಗಿ ಮಣಿಮೇಕಲೆ, ಹೂ ಕೊಯ್ಯಲು ಯಾವ ಉದ್ಯಾನವನಕ್ಕೆ ಹೋಗೋಣ?'

ಮಣಿಮೇಕಲೆಯು, 'ಇರುವಂತಿಗೆ, ಉಯ್ಯಾಲೆ ವನ ಅಥವಾ ಬೋಧಿವನ, ಯಾವುದಾದರೂ ಸರಿಯೇ ಅಕ್ಕಾ'

ಕ್ಷಣಕಾಲ ಯೋಚಿಸಿದ ಸುಧಾಮತಿಯು 'ಮಣಿಮೇಕಲೆ, ಇರುವಂತಿಗೆ ಉದ್ಯಾನವನ ಅರಮನೆಗೆ ಸಮೀಪದ ಅಗ್ರಹಾರದ ಬದಿಯಲ್ಲಿದ್ದರೆ, ಉಯ್ಯಾಲೆ ಉದ್ಯಾನವನವು ಉತ್ತಮ ಜನರು ವಾಸಿಸುವ ಕೇರಿಯ ನಡುವಿನಲ್ಲಿದೆ. ಉತ್ಸವದ ದಿನಗಳಲ್ಲಿ ಅಲ್ಲಿ ಜನವೋ ಜನ. ಆದ್ದರಿಂದ ನಮಗೆ ಹೂ ತರಲು ಕಷ್ಟವಾದೀತು. ಬೋಧಿವನವು ನಗರದ ಆಯಗಾರರು ವಾಸಿಸುವ ಕೇರಿಗಳ ಕೆಳತುದಿಯಲ್ಲಿದೆ. ಮಡಿವಾಳರ ಕೇರಿ, ಕುಂಬಾರಗೇರಿ, ಚಮ್ಮಾರರ ಕೇರಿ, ಗಾಣಿಗರ ಕೇರಿ, ನೇಕಾರರ ಕೇರಿ ಇವುಗಳನ್ನೆಲ್ಲಾ ದಾಟಿಕೊಂಡು ಅಲ್ಲಿಗೆ ಹೋಗಬೇಕು. ಇಷ್ಟಕ್ಕೂ ಅಲ್ಲಿ ಜನಸಂಚಾರ ಕಡಿಮೆ. ಮೇಲಾಗಿ, ಈ ಇರುವಂತಿಗೆ ಮತ್ತು ಉಯ್ಯಾಲೆ ವನಗಳಲ್ಲಿ ಇರುವ ಹೂಗಳೆಲ್ಲಾ ಒಂದೇ ಜಾತಿಯವು. ಎಲ್ಲವೂ ಒಂದೇ ಬಣ್ಣ, ಒಂದೇ ಆಕಾರ, ಒಂದೇ ಅಳತೆಯವು. ಅವುಗಳಲ್ಲಿ ಅಂತಹ ಸೊಗಸಿಲ್ಲ!